**B** **SL. No. : T**

ಒಟ್ಟು ಪ್ರಶ್ನೆಗಳ ಸಂಖ್ಯೆ : 45 ]

Total No. of Questions : 45 ]

**CCE RR**
**UNREVISED**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

[ Total No. of Printed Pages : 8

**ಸಂಕೇತ ಸಂಖ್ಯೆ : 33-K**

**Code No. : 33-K**

# ವಿಷಯ : ದ್ವಿತೀಯ ಭಾಷೆ — ಕನ್ನಡ

# Subject : Second Language — KANNADA

**( ಹಳೆ ಪಠ್ಯಕ್ರಮ / Old Syllabus )**

**( ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater )**

ದಿನಾಂಕ : 27. 06. 2019 ] [ Date : 27. 06. 2019

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-00 ರವರೆಗೆ ] [ Time : 9-30 A.M. to 12-00 Noon

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 45 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

## ವಿಭಾಗ – 'ಎ'

### ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೂರಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** $8 \times 1 = 8$

1. ವಿಷದ ಬಾಣವು ಮರಕ್ಕೆ ತಗುಲಿದ್ದರಿಂದಾದ ಪರಿಣಾಮವೇನು ?
2. ಕ್ರಿಕೆಟ್ ಆಟದ ಬಗ್ಗೆ ಇರುವ ಅಪವಾದವೇನು ?
3. ಭಾರತೀಯ ಸಂಗೀತದ ಎರಡು ಶೈಲಿಗಳು ಯಾವುವು ?
4. ಪುನರ್ಜನ್ಮವಿದ್ದುದೇ ಆಗಿದ್ದಲ್ಲಿ ಪುಟ್ಟರಾಜರ ಬಯಕೆ ಏನಾಗಿತ್ತು ?
5. ಅಜ್ಜ ಅಕ್ಕಿಯನ್ನು ತೆಗೆದುಕೊಂಡು ಹೋದದ್ದು ಹೇಗೆ ?
6. ಅರಿವು ಪದ್ಯದಲ್ಲಿ ಮೈ ಹಣ್ಣಾಗಲು ಕಾರಣವೇನೆಂದು ಹೇಳಿದ್ದಾರೆ ?
7. ಯಾವುದಕ್ಕಾಗಿ ಹಗಲಿರುಳು ಹೋರಾಡಬೇಕೆಂದು 'ಗುರಿ' ಪದ್ಯದಲ್ಲಿ ಕವಿ ಹೇಳಿದ್ದಾರೆ ?
8. ವೇಷಧರಿಸಿದ ಮೇಲೆ ಹೇಗಿರಬೇಕೆಂದು ಸೊನ್ನಲಿಗೆಯ ಸಿದರಾಮ ಹೇಳಿದ್ದಾರೆ ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $11 \times 2 = 22$

9. ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು ?
10. ರಾಹುಲ್ ದ್ರಾವಿಡರನ್ನು 'ಗೋಡೆ' ಎಂದು ಕರೆಯಲು ಕಾರಣವೇನು ?
11. ಪುಟ್ಟರಾಜರೆಂದರೆ ಕಣ್ಣಿಗೆ ಕಟ್ಟುವ ಚಿತ್ರ ಯಾವುದು ?
12. ಪಶ್ಚಿಮ ಘಟ್ಟಗಳನ್ನು ಅತಿಯಾಗಿ ದೋಚಿದುದರ ಪರಿಣಾಮವೇನು ?
13. ಪಶ್ಚಿಮ ಘಟ್ಟಗಳು ಯಾವುದರ ಗುಡಾಣವಾಗಿವೆ ?
14. ಅಂತರಾತ್ಮವು ಯಾವಾಗ ಕಿರುಚಿಕೊಳ್ಳುತ್ತದೆ ?
15. ಕವಿ ಸಿ.ಪಿ.ಕೆ.ಯವರು ಪ್ರತಿಯೊಬ್ಬನೂ ತನ್ನದಾದ ಕರ್ತವ್ಯವನ್ನು ಹೇಗೆ ಮಾಡಬೇಕೆನ್ನುತ್ತಾರೆ ?
16. ಕಂದಯ್ಯ ಅತ್ತರೆ ಆಗುವ ಅಚ್ಚರಿಗಳೇನು ?
17. ಚೆನ್ನಮಲ್ಲಿಕಾರ್ಜುನನ ಜ್ಞಾನವಿಲ್ಲದೆ ತನಗೆ ಫಲವಿಲ್ಲ ಎಂದು ಅಕ್ಕ ಹೇಳುವಾಗ ನೀಡುವ ಉದಾಹರಣೆಗಳಾವುವು ?
18. ಜೋಯಿಸರ ಮಾತು ಯಾವಾಗ ವೇದವಾಕ್ಯವಾಗುತ್ತಿತ್ತು ?
19. ಅನನುಭವಿ ಸಾವಿತ್ರಿ ಮೊದಲ ಬಾರಿ ಗಂಡನ ಮನೆಯಲ್ಲಿ ಅಡುಗೆ ಮಾಡಿದ್ದು ಹೇಗೆ ?

20. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 3 = 3

ಯುಗದ ಹಿಂದಿನ ....................................................

..........................................................................

..........................................................................

.................................................. ತುಂಬ ಸವಿಚೈತ್ರವು.

***ಅಥವಾ***

ಕೊರಡ ಕೊನರಿಸಿ ..................................................

..........................................................................

..........................................................................

.............................................. ಕಲರವಕೆ ಮತ್ತೇರಿದೆ.

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** 2 × 3 = 6

21. ಬಿ.ಪಿ. ರಾಧಾಕೃಷ್ಣ

22. ಸು.ರಂ. ಎಕ್ಕುಂಡಿ

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ :** 2 × 3 = 6

23. "ಅವತ್ತು ನೀವು ಹಾಂಗ ಮಾಡದಿದ್ರ ನಾನು ಇನ್ನೂ ಕಸಾಗುಡಿಸ್ತಾನೇ ಇರುತ್ತಿದ್ದೆ."

24. "ದಾಳಿ ಬಂದೊಡನೆ ಶರಣೆಂಬ ಹೆಣ್ತನವು"

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 × 4 = 8

25. ನನ್ನ ಗೋಪಾಲ ನಾಟಕದಲ್ಲಿ ನೀವು ಮೆಚ್ಚುವ ಪ್ರಕೃತಿ ಸೊಬಗನ್ನು ವರ್ಣಿಸಿ ಬರೆಯಿರಿ.

***ಅಥವಾ***

ನನ್ನ ಗೋಪಾಲ ನಾಟಕದಲ್ಲಿ ತಾಯಿ ಪ್ರೀತಿಯನ್ನು ನೀವು ಮೆಚ್ಚುವ ಅಂಶಗಳೊಂದಿಗೆ ಬರೆಯಿರಿ.

26. ಅರ್ಜುನ ಮತ್ತು ಉತ್ತರಕುಮಾರ ಇವರ ಗುಣಸ್ವಭಾವದಲ್ಲಿಯ ವ್ಯತ್ಯಾಸವನ್ನು ಬರೆಯಿರಿ.

***ಅಥವಾ***

ಅರ್ಜುನ ಮತ್ತು ಉತ್ತರಕುಮಾರ ಇವರ ನಡುವಿನ ಸಂಭಾಷಣೆಯ ಸಾರವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** 12 × 1 = 12

27. 'ಏಕೈಕ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

(ಎ) ವೃದ್ಧಿ ಸಂಧಿ (ಬಿ) ಗುಣ ಸಂಧಿ

(ಸಿ) ಯಣ್ ಸಂಧಿ (ಡಿ) ಸವರ್ಣದೀರ್ಘ ಸಂಧಿ

28. ತದ್ಭವ ರೂಪದಲ್ಲಿರುವ ಪದ

(ಎ) ಅಚ್ಚರಿ (ಬಿ) ವರ್ಣನೆ

(ಸಿ) ಸಂಸ್ಕೃತ (ಡಿ) ಸ್ಥಾನ

29. 'ಬಾನ' ಪದದ ಅರ್ಥ

(ಎ) ಅರಿವು (ಬಿ) ಆಚಾರ

(ಸಿ) ಅನ್ನ (ಡಿ) ಆಕಾರ

30. 'ಮನೆಯಿಂದ' ಪದದಲ್ಲಿರುವ ವಿಭಕ್ತಿ

(ಎ) ತೃತೀಯಾ (ಬಿ) ಪ್ರಥಮಾ

(ಸಿ) ದ್ವಿತೀಯಾ (ಡಿ) ಸಪ್ತಮೀ

31. 'ಸಹನೆ' ಪದದ ವಿರುದ್ಧಾರ್ಥಕ

(ಎ) ಸಹಜ (ಬಿ) ಸಹಕಾರ

(ಸಿ) ಅಸಹನೆ (ಡಿ) ಸಹಾಯ

32. ಗ್ರಾಂಥಿಕ ರೂಪದಲ್ಲಿರುವ ಪದ

(ಎ) ಭೆಟ್ಟಿಆಗ್ರಿ (ಬಿ) ಮನುಷ್ಯ

(ಸಿ) ತಪ್ಪಾತರೀ (ಡಿ) ಮನ್ಯಾಗಿದ್ದು

33. 'ಮುಖಚಂದ್ರ' ಇಲ್ಲಿರುವ ಅಲಂಕಾರ

(ಎ) ಉಪಮಾಲಂಕಾರ (ಬಿ) ದೃಷ್ಟಾಂತಾಲಂಕಾರ

(ಸಿ) ಉತ್ಪ್ರೇಕ್ಷಾಲಂಕಾರ (ಡಿ) ರೂಪಕಾಲಂಕಾರ

34. 'ಬನ್ನಿ ಬನ್ನಿ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ

(ಎ) ಜೋಡಿಪದ (ಬಿ) ಗುಣವಾಚಕ

(ಸಿ) ದ್ವಿರುಕ್ತಿ (ಡಿ) ಅನುಕರಣಾವ್ಯಯ

35. ನಾಲ್ಕು ಸಾಲಿನ ಪದ್ಯಕ್ಕೆ ಹೀಗೆನ್ನುತ್ತಾರೆ

(ಎ) ಷಟ್ಪದಿ (ಬಿ) ಚೌಪದಿ

(ಸಿ) ದ್ವಿಪದಿ (ಡಿ) ತ್ರಿಪದಿ

36. 'ಅಂಗಾಲು' ಈ ಸಮಾಸಕ್ಕೆ ಉದಾಹರಣೆ

(ಎ) ದ್ವಿಗು ಸಮಾಸ (ಬಿ) ಅಂಶಿ ಸಮಾಸ

(ಸಿ) ತತ್ಪುರುಷ ಸಮಾಸ (ಡಿ) ಕ್ರಿಯಾ ಸಮಾಸ

37. 'ಸರ್ವನಾಮ' ಪದಕ್ಕೆ ಉದಾಹರಣೆ

(ಎ) ಅಶೋಕ (ಬಿ) ಅರಸ

(ಸಿ) ಅಂಜಲಿ (ಡಿ) ಅವರು

38. ಭೂತಕಾಲದಲ್ಲಿರುವ ಕ್ರಿಯಾಪದ

(ಎ) ಬರುವನು (ಬಿ) ಬರುತ್ತಾನೆ

(ಸಿ) ಬರನು (ಡಿ) ಬಂದನು

## ವಿಭಾಗ – 'ಸಿ'

### (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** $4 \times 1 = 4$

ನಮ್ಮ ಸುತ್ತಮುತ್ತಲಿನವರೊಡನೆ ವ್ಯವಹರಿಸುವುದಕ್ಕೆ ಹಾಗೂ ವಿಚಾರ ವಿನಿಮಯ ಮಾಡುವುದಕ್ಕೆ ಭಾಷೆ ಒಂದು ಅಮೂಲ್ಯ ಸಾಧನ. ಇಂಥ ಅಮೂಲ್ಯವಾದ ಆ ಭಾಷೆಯ ಉತ್ಪತ್ತಿ ಎಂದು, ಹೇಗಾಯಿತು ಎಂಬ ಪ್ರಶ್ನೆಗೆ ಸರಿಯಾದ ಉತ್ತರ ಹೇಳುವುದು ಕಷ್ಟಸಾಧ್ಯ. ಭಾಷೆಯ ಮೂಲವನ್ನು ಮಾನವ ಕಂಡುಹಿಡಿಯುವುದೆಂದರೆ, ನಿರೀಕ್ಷಕನೂ ನಿರೀಕ್ಷಣೆಯ ವಸ್ತುವೂ ಒಂದೇ ಆದಂತೆಯೇ ಸರಿ. ಮಾನವನು ತನ್ನ ವಿಶಿಷ್ಟ ಮೇಧಾಶಕ್ತಿಯಿಂದ ಜಂಗಮ ಜಗತ್ತಿನ ಇತರ ಜಂತುಗಳಿಗಿಂತ ಭಿನ್ನವಾಗಿದ್ದಾನೆ.

ಮಕ್ಕಳಿಗ ಮೊಲೆಯುಡುವ ಎಲ್ಲಾ ಪ್ರಾಣಿಗಳು ಚಲನವಲನಗಳ ವಿಷಯವಾಗಿ, ಆಹಾರ ವಿಚಾರಗಳ ವಿಚಾರವಾಗಿ ತಮ್ಮ ಮಕ್ಕಳಿಗೆ ಸಹಜವಾಗಿ ತರಪೇತು ಕೊಡುವುದನ್ನು ಕಾಣುತ್ತೇವೆ. ಅನುಕರಣದಿಂದ ಕಿರಿಯವು ಹಿರಿಯ ಪ್ರಾಣಿಗಳಂತೆ ಕಾರ್ಯ ಮಾಡುವುದನ್ನು ಕಲಿಯುತ್ತವೆ. ಇಲ್ಲಿಗೆ ಅವುಗಳ ಸಾಮಾನ್ಯ ಸಂಸ್ಕೃತಿ ಮುಗಿಯಿತು. ಮಾನವನಾದರೋ ತನ್ನ ಸಮಕಾಲೀನ ಜನತೆಯದು ಮಾತ್ರವೇ ಅಲ್ಲ ಗತಕಾಲದ ಹಿರಿಯರ ಜ್ಞಾನಾನುಭವಗಳ ಸಾರ ಸರ್ವಸ್ವವನ್ನು ಉಳಿಸಿಕೊಂಡು ಬೆಳೆಸಬಲ್ಲ. ಇದಕ್ಕೆ ಸಾಧನ ಭಾಷೆ. ಭಾಷೆಯ ಪ್ರಯೋಜನ ಮನುಷ್ಯನಿಗೆ ಇಲ್ಲದೆ ಹೋಗಿದ್ದರೆ ಆತ ಬರಿಯ ಜಂತುವಾಗಿಯೇ ಉಳಿಯುತ್ತಿದ್ದ.

*ಪ್ರಶ್ನೆಗಳು :*

39. ಮಾನವನು ಜಂಗಮ ಜಗತ್ತಿನ ಇತರ ಜಂತುಗಳಿಗಿಂತ ಹೇಗೆ ಭಿನ್ನವಾಗಿದ್ದಾನೆ ?

40. ಪ್ರಾಣಿಗಳು ತಮ್ಮ ಮಕ್ಕಳಿಗೆ ಯಾವ ಯಾವ ವಿಷಯವಾಗಿ ತರಪೇತು ನೀಡುತ್ತವೆ ?

41. ಭಾಷೆಯು ಯಾವುದಕ್ಕೆ ಅಮೂಲ್ಯ ಸಾಧನವಾಗಿದೆ ?

42. ಭಾಷೆಯ ಮೂಲಕ ಏನನ್ನು ಉಳಿಸಿಕೊಂಡು ಬೆಳೆಸಬಹುದಾಗಿದೆ ?

43. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** $1 \times 3 = 3$

* ಆಳಾಗಿ ದುಡಿಯಬಲ್ಲವ ಅರಸಾಗಿ ಆಳಬಲ್ಲ
* ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ
* ಎತ್ತಿಗೆ ಜ್ವರ ಎಮ್ಮೆಗೆ ಬರೆ

44. ನಿಮ್ಮನ್ನು ಶಿವಮೊಗ್ಗದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಸಾತ್ವಿಕ್' ಎಂದು ಭಾವಿಸಿಕೊಂಡು, ವ್ಯಾಸಂಗ ದೃಢೀಕರಣ ಪತ್ರ ಕೊಡುವಂತೆ ಕೋರಿ ಶಾಲಾ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರ ಬರೆಯಿರಿ. $1 \times 4 = 4$

***ಅಥವಾ***

ನಿಮ್ಮನ್ನು ಮೈಸೂರಿನ 'ಪಲ್ಲವಿ' ಎಂದು ಭಾವಿಸಿಕೊಂಡು, ಶಾಲಾ ಪ್ರವಾಸದ ಅನುಭವಗಳನ್ನು ವಿವರಿಸಿ ರಾಯಚೂರಿನಲ್ಲಿ ವಾಸವಾಗಿರುವ ಶಿವಪ್ಪ ಎಂಬ ಹೆಸರಿನ ತಂದೆಗೆ ಒಂದು ಪತ್ರ ಬರೆಯಿರಿ.

45. **ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ :** $1 \times 4 = 4$

* ಸ್ವಚ್ಛತಾ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ
* ಮೊಬೈಲ್ ಬಳಕೆಯ ಪ್ರಯೋಜನಗಳು
* ಗ್ರಂಥಾಲಯಗಳ ಬಳಕೆ